**<u>ಅಸಲು ದಾವಾ ಸಂಖ್ಯೆ-137/2023</u>** **<u>ಪಿ.ಡಬ್ಲ್ಯೂ:-</u> 1**

ದಿನಾಂಕಃ **07-08-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು:-2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ:-</u>**

ದಾವಾ ಸ್ವತ್ತುಗಳನ್ನು ದಿಃ 03-07-2012 ರಂದು ಪ್ರತಿವಾದಿ 2 ರಿಂದ 4 ರವರು ದಾವಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು, ಪ್ರತಿವಾದಿ 5 ಮತ್ತು 6 ರವರು ರೂ.20,000/- ಹಣವನ್ನು ನಮ್ಮ ಭಾಗಾಂಶಕ್ಕೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಪ್ರತಿವಾದಿಗಳು ಮತ್ತು ನನ್ನ ತಾಯಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿ 2 ರಿಂದ 4 ರವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2012 ನೇ ಸಾಲಿನಲ್ಲಿ ಪ್ರತಿವಾದಿ 2 ರಿಂದ 4 ರವರು ಮೆಕ್ಕೆಜೋಳವನ್ನು ಬೆಳೆಯುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ ಈಗ ಜೀವಂತವಾಗಿದ್ದಾರೆ. 1 ನೇ ಪ್ರತಿವಾದಿಯ ಜೀವನಾಂಶಕ್ಕಾಗಿ ಪ್ರತಿವಾದಿ 2 ರಿಂದ 4 ರವರು ಸರ್ವೆ ನಂ.95 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಮೀಸಲಿಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನನ್ನ ಮಗ ಹರೀಶ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ನನ್ನ ಮಗ ಹರೀಶ 1 ನೇ ಪ್ರತಿವಾದಿಯ ಜೊತೆ ಪ್ರತ್ಯೇಕವಾಗಿ ಮನೆಯನ್ನು ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿ 2 ರಿಂದ 4 ರವರು ನೋಡಿಕೊಳ್ಳದೇ ಇದ್ದ ಕಾರಣ ನನ್ನ ಮಗ ನೋಡಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು ಮದುವೆಯಾದಗಿನಿಂದಲೂ ನನ್ನ ಯಜಮಾನರ ಊರಾದ ಹರಳಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಯಜಮಾನರು ಜೀವಂತವಾಗಿರುವವರೆಗೆ ಹರಳಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೆವು ಅವರ ಮರಣದ ನಂತರ ಗೋಪಗೊಂಡನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದು

ನುಡಿಯುತ್ತಾರೆ. ನನ್ನ ಯಜಮಾನರ ಹೆಸರು ಹನುಮಂತಪ್ಪ ಎಂದರೆ ಸರಿ. ನಮ್ಮ ಯಜಮಾನರಿಗೆ ನೀರಾವರಿ ಜಮೀನು, ಕಣ ಮತ್ತು ಮನೆ ಇದೆ ಎಂದರೆ ಸರಿಯಲ್ಲ. ನಮ್ಮ ಯಜಮಾನರಿಗೆ ಜಮೀನು, ಕಣ ಮತ್ತು ಮನೆ ಇದ್ದರು ಸಹ ಪ್ರತಿವಾದಿ 2 ರಿಂದ 4 ರವರಿಗೆ ಸೇರಿದ ದಾವಾ ಆಸ್ತಿಗಳಲ್ಲಿ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಈಗ ಬೆಂಗಳೂರಿನಲ್ಲಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ಈಗ 4 ನೇ ಪ್ರತಿವಾದಿಗೆ ಸೇರಿದ ಜಮೀನನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಚಿತಾವಣೆಯ ಮೇರೆಗೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 4 ರವರು ದಾವಾ ಆಸ್ತಿಗಳಲ್ಲಿ ಅಡಿಕೆ ತೋಟವನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ 2 ರಿಂದ 4 ರವರು ದಾವಾ ಆಸ್ತಿಗಳಲ್ಲಿ ಅಡಿಕೆ ತೋಟವನ್ನು ಹಾಕಿಕೊಂಡು ವ್ಯವಸಾಯ ಮಾಡುತ್ತಿದ್ದರಿಂದ ಸದರಿ ಆಸ್ತಿಯಲ್ಲಿ ಭಾಗಾಂಶ ಬೇಕು ಎಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 4 ರವರು ಜುಬಾನಿ ಹಿಸ್ಸೆ ಮಾಡಿಕೊಂಡ ಸಮಯದಲ್ಲಿ ನಾನು, ಪ್ರತಿವಾದಿ 5 ಮತ್ತು 6 ರವರು ಹಣವನ್ನು ಪಡೆದುಕೊಂಡಿದ್ದರಿಂದ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ನಮೂದು ಮಾಡಿರುವಂತೆ ಯಾವುದೇ ಪಂಚಾಯಿತಿ ನಡೆದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 1 ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದು ನ್ಯಾಯುತ ದೃಷ್ಟಿಯಿಂದ ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.